ಮಂಗ ಮಂಗನೆ.



✍️ಕೌಡೂರು ನಾರಾಯಣ ಶೆಟ್ಟಿ,
ಇಟೆಲಿ.

ಒಂದು ದೊಡ್ಡ ಕೋತಿ, ಬಾರಿ ಚುರುಕು, ನಾಯಿಯಂತೆ ತುಂಬಾ ಸ್ವಾಮಿನಿಷ್ಠೆ. ಇದನ್ನು ಕಂಡ ಒಬ್ಬ ಅರಸನಿಗೆ ಬಹಳ ಸಂತಸವಾಯಿತು. ತನ್ನ ಬೆಂಗಾವಲಿಗೆ ಮನುಷ್ಯರಿಂದ ಈ ಮಂಗವೇ ಹೆಚ್ಚು ಸೂಕ್ತ ಅನಿಸಿತು. ಮನುಷ್ಯರನ್ನು ನಂಬುವಂತಿಲ್ಲ, ಉದಾಸೀನ ಮಾಡಬಹುದು ಇಲ್ಲವೇ ನಾನು ಮಲಗಿದಾಗ ಆತನೂ ಮಲಗಬಹುದು. ಒಂದು ಪಶು ಮೋಸ ಮಾಡಲಾರದು, ಆದರಲ್ಲೂ ಈ ಮಂಗ ತುಂಬಾ ಚಾಲಾಕಿ. ಹೀಗೆ ಯೋಚಿಸಿ ಆ ಮಂಗನನ್ನು ಅಂಗರಕ್ಷಕನಾಗಿ ನೇಮಿಸಿದ. ಹಗಲಿರುಳೂ ಅರಸ ಒಟ್ಟಿಗೆ ಇರುತ್ತಿತ್ತು, ಅರಮನೆಯಲ್ಲಿ ಅಡೆತಡೆ ಇಲ್ಲದೆ ಬೇಕಾದಲ್ಲಿ ಹೋಗಿ ಬರಬಹುದಿತ್ತು.

ಹೀಗಿರುವಾಗ, ಒಂದು ದಿನ ಅರಸು ಮಲಗಿದ್ದ, ಹಂಸತೂಲಿಕ ತಲ್ಪದಲ್ಲಿ. ಅಂಗರಕ್ಷಣೆಯ ಜೊತೆಗೆ, ಬೀಸಣಿಗೆಯಿಂದ ಗಾಳಿ ಬೀಸುತ್ತಾ, ಅರಸನ ಸೇವೆ ಮಾಡುತ್ತಿತ್ತು. ಆಗ ಒಂದು ನೊಣ ಹಾರಿ ಬಂದು ಅರಸನ ಎದೆಯ ಮೇಲೆ ಕುಳಿತಿತು. ಮಂಗ ಬೀಸಣಿಕೆಯಿಂದ ಒಮ್ಮೆ ನೊಣವನ್ನು ಓಡಿಸಿತು, ಇನ್ನೊಮ್ಮೆ ಓಡಿಸಿತು, ಮೂರು ಮೂರು ಬಾರಿ ಓಡಿಸಿದರೂ, ಮತ್ತೆ ಮತ್ತೆ ಬಂದು ಕೂರುತ್ತಿತ್ತು ನೊಣ. ಮಂಗನಿಗೆ ಪಿತ್ಥ ಕೆದರಿತು. ನಿನಗೆ (ಸಾಯುವ) ದಿನ ಹತ್ತಿರ ಬಂತು, ಕಲಿಸುತ್ತೇನೆ ಬುದ್ಧಿ ಅಂತ ಅತ್ತಿತ್ತ ನೋಡುವಾಗ, ಅರಸನ ಖಡ್ಗ ಕಂಡು ಬಂತು. ಕತ್ತಿ ಎತ್ತಿ ನೊಣಕ್ಕೆ ಗುರಿಯಿಟ್ಟು ಕಡಿಯಿತು. ನೊಣ ಹಾರಿ ಹೋಯಿತು, ಅರಸ ಎದೆ ಎರಡು ಸೀಳಾಯಿತು.

ಘಷ್ಟಜ ಚಾಲಾಕಿ, ಜಾಣತನ ಇದ್ದರೂ, ವಿವೇಚನೆ ಇಲ್ಲದ ಮೂರ್ಖರ ಬಗ್ಗೆ ಜಾಗರೂಕರಾಗಿ ಇರಬೇಕು. ಹೆಡ್ಡನು ಒಳ್ಳೆಯ ಮನುಷ್ಯನಲ್ಲ, ಸಿಪ್ಪೆ ಹೆಚ್ಚಾದದ್ದು ಒಳ್ಳೆಯ ತೆಂಗಿನಕಾಯಿಯಲ್ಲ. ಹಾಗೆಯೆ ಮೂರ್ಖ ಮಿತ್ರನಿಗಿಂತ, ಸಮರ್ಥ ಶತ್ರುವೇ ಲೇಸು.